# ಕಿಮ್ಸ್‌ಗೆ ಅತ್ಯಾಧುನಿಕ ವೈದ್ಯಕೀಯ ಪರಿಕರ ಹಸ್ತಾಂತರ

ಹುಬ್ಬಳ್ಳಿ: ಜಿಲ್ಲೆಯ ತುರ್ತು ಆರೋಗ್ಯ ಸೇವೆಗಳ ಮೂಲ ಸೌಕರ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇಲ್ಲಿನ ಕಿಮ್ಸ್ ಆಸ್ಪತ್ರೆಗೆ ಎಡಿಎಂ ಆಗ್ರೋ ವತಿಯಿಂದ 38 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ವಿಶ್ವ ದರ್ಜೆಯ ವೈದ್ಯಕೀಯ ಪರಿಕರಗಳನ್ನು ನೀಡಲಾಯಿತು.

ಕೋವಿಡ್ ಮತ್ತು ಇತರ ಆರೋಗ್ಯ ಸಮಸ್ಯೆಗಳ ಚಿಕಿತ್ಸೆ ನಿಟ್ಟಿನಲ್ಲಿ ಅತ್ಯಂತ ಅವಶ್ಯಕವಾಗಿರುವ 22 ಲಕ್ಷ ರೂ. ಮೌಲ್ಯದ ಒಂದು ಅನಸ್ತೇಷಿಯಾ ವರ್ಕ್‌ಸ್ಟೇಷನ್, ತಲಾ 1.8 ಲಕ್ಷ ರೂ. ಮೌಲ್ಯದ ಎಂಟು ನವಜಾತ ಶಿಶುಗಳ ಸುರಕ್ಷತೆಗಾಗಿನ ನಿಯೋನೇಟಲ್ ವಾರ್ಮರ್‌ಗಳು ಹಾಗೂ ತಲಾ 6,000 ರೂ. ಮೌಲ್ಯದ 10 ವೈದ್ಯಕೀಯ ಉಪಕರಣಗಳ ಸೆಟ್‌ಗಳನ್ನು ಹಸ್ತಾಂತರ ಮಾಡಲಾಯಿತು. ಎಡಿಎಂ ಆಗ್ರೋದಿಂದ ಸಹಾಯವನ್ನು ಪಡೆದು ಕಿಮ್ಸ್‌ಗೆ ಈ ಸಾಧನಗಳನ್ನು ಒದಗಿಸುವ ಪ್ರಕ್ರಿಯೆಯ ಸಾರಥ್ಯವನ್ನು ದೇಶಪಾಂಡೆ ಪ್ರತಿಷ್ಠಾನ ವಹಿಸಿತ್ತು. ಹಸ್ತಾಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಹುಬ್ಬಳ್ಳಿ ಮಹಾನಗರ ಪಾಲಿಕೆ ಆಯುಕ್ತ ಗೋಪಾಲಕೃಷ್ಣ ಬಿ.ಮ ಕಿಮ್ಸ್‌ಗೆ ಅತ್ಯಾಧುನಿಕ ವೈದ್ಯಕೀಯ ಪರಿಕರಗಳನ್ನು ಒದಗಿಸಿದ ಎಡಿಎಂ ಆಗ್ರೋ ಸಂಸ್ಥೆಯ ಔದಾರ್ಯವನ್ನು ಶ್ಲಾಘಿಸಿದರು.

ಎಡಿಎಂ ಆಗ್ರೋದ ತಾಂತ್ರಿಕ ಸ್ಥಾವರದ ಮುಖ್ಯಸ್ಥರಾಗಿರುವ ಹೇಮಂತ್ ಕುಮಾರ್ ಸಾರಸ್ವತ್ ಅವರು, ಸಮಾಜವನ್ನು ಕೋವಿಡ್ ಮುಕ್ತಗೊಳಿಸುವ ಗುರಿಯೊಂದಿಗೆ ಎಡಿಎಂ ಆಗ್ರೋ ಕಿಮ್ಸ್‌ಗೆ

ಅತ್ಯುನ್ನತ ವೈದ್ಯಕೀಯ ಸಲಕರಣೆಗಳನ್ನು ನೀಡಿ ಬೆಂಬಲಿಸಿದೆ ಎಂದರು. ದೇಶಪಾಂಡೆ ಪ್ರತಿಷ್ಠಾನದ ಸಿಇಒ ಆಗಿರುವ ವಿವೇಕ ಪವಾರ್ ಮಾತನಾಡಿದರು. ಡಾ. ನಾರಾಯಣ ಹೆಬಸೂರು, ಎಡಿಎಂ ಆಗ್ರೋದ ವಾಣಿಜ್ಯ ವಿಭಾಗದ ಡೆಪ್ಯುಟಿ ಮ್ಯಾನೇಜರ್ ಆಗಿರುವ ಶಶಾಂಕ್ ರೆಡ್ಡಿ, ಎಚ್.ಆರ್. ಮ್ಯಾನೇಜರ್ ಅನೀಲಕುಮಾರ್ ತೇರದಾಳ, ದೇಶಪಾಂಡೆ ಸ್ಕಿಲ್ಲಿಂಗ್ ಸಿಇಇ ಪಿ.ಎನ್. ನಾಯಕ್, ಪ್ರತಿಷ್ಠಾನದ ಕಾರ್ಯಾನುಷ್ಠಾನ ವಿಭಾಗದ ಹಿರಿಯ ನಿರ್ದೇಶಕ ವಿಜಯ್ ಪುರೋಹಿತ ಉಪಸ್ಥಿತರಿದ್ದರು.